

# ಬೋ ಫಿಡಲ್ ರಾಕ್; ಸ್ಕಾಟ್ಲೆಂಡ್‌ನ ಸೂಜಿಗಲ್ಲು

ನೈಸರ್ಗಿಕವಾಗಿ ರಚನೆಯಾಗಿರುವ ಸ್ಕಾಟ್ಲೆಂಡ್‌ನ ಈ ಬೃಹತ್ ಬಂಡೆ, ಥೇಟ್ ಪಿಟೀಲಿನಂತಿದೆ, ಪ್ರವಾಸಿಗರನ್ನು ಸೆಳೆಯುತ್ತಿದೆ.

■ ಎಂ.ಎಸ್. ರಘುನಾಥ್

ಸ್ಕಾಟ್ಲೆಂಡ್ ಪ್ರವಾಸದ ವೇಳೆ ವಿಶಿಷ್ಟ ಸ್ಥಳವೊಂದನ್ನು ಸಂದರ್ಶಿಸುವ ಅವಕಾಶ ಒದಗಿಬಂದಿತು. ಪೋರ್ಟ್‌ನೋಕಿ, ಈಶಾನ್ಯ ಸ್ಕಾಟ್ಲೆಂಡ್‌ನ ಸಮುದ್ರತೀರದ ಸುಂದರ ಹಳ್ಳಿ. ಕಡಲನ್ನು ಆತುಕೊಂಡಂತಿರುವ ಆ ಹಳ್ಳಿಯ ಸಹಜ ಪ್ರಾಕೃತಿಕ ಸೌಂದರ್ಯದ ಜೊತೆಗೆ, ಪ್ರವಾಸಿಗರನ್ನು ಸೆಳೆಯುತ್ತಿರುವ ಮತ್ತೂ ಒಂದು ವಿಶೇಷ ಅಲ್ಲಿದೆ. ಅದೇ, 'ಬೋ ಫಿಡಲ್ ರಾಕ್'.

ಪ್ರಕೃತಿಯ ಕೆಲವು ಸಂಗತಿಗಳು ಮನುಷ್ಯನ ಪಾಲಿಗೆ ಈಗಲೂ ನಿಗೂಢ, ಬಿಡಿಸಲಾಗದ ರಹಸ್ಯ, ಸೋಜಿಗ. ಆ ಸಾಲಿಗೆ ಫಿಡಲ್ ರಾಕ್ ಕೂಡ ಸೇರುತ್ತದೆ.

ಫಿಡಲ್ ರಾಕ್ ಎಂದರೆ, ಪಿಟೀಲು ಕಮಾನು ಬಂಡೆ. ನೋಡಲು ಪಿಟೀಲಿನಂತೆ ಕಾಣುವ ಕಾರಣಕ್ಕೆ ಈ ಬಂಡೆಗೆ ಈ ಹೆಸರು. ಪಿಟೀಲು ಕಮಾನಿನ ತುದಿಯನ್ನು ಹೋಲುವ ಈ ಬಂಡೆ, ಒಂದು ಕೋನದಲ್ಲಿ ಆನೆಯಂತೆಯೂ ಗೋಚರಿಸುತ್ತದೆ. ಸುಮಾರು ಮೂವತ್ತು ಮೀಟರ್ ಎತ್ತರದ್ದಾಗಿದೆ. ಇದೊಂದು ನೈಸರ್ಗಿಕ ಸಾಗರದ ಕಮಾನಾಗಿದ್ದು, ಸ್ಫಟಿಕವನ್ನೊಳಗೊಂಡ ರೂಪಾಂತರ ಶಿಲೆ ಇದಾಗಿದೆ.



ಸಾವಿರಾರು ವರ್ಷಗಳ ಕಾಲ ಈ ಬಂಡೆಯ ರಚನೆಯಾಗಿದೆ. ಕ್ವಾರ್ಟ್‌ಜೈಟ್ ಹಾಗೂ ಮೆಟಮಾರ್ಫಿಕ್‌ರಾಕ್ ಖನಿಜಗಳು ಸೇರಿ ದೊಡ್ಡ ಹರಳುಗಳಾಗಿ ಬಂಡೆಯ ರೂಪ ಪಡೆದುಕೊಂಡಿವೆ. ಬಕ್ಕಿ ಮತ್ತು ಕಲನ್ ನಡುವಿನ ಕರಾವಳಿ ಪ್ರದೇಶದಲ್ಲಿ ಕಂಡುಬರುವ ಕ್ವಾರ್ಟ್‌ಜೈಟ್ ರಚನೆಗಳ ಒಂದು ಭಾಗವಾಗಿದೆ. ಸಾವಿರದಿಂದ ಐನೂರ ಮೂವತ್ತು ಲಕ್ಷ ವರ್ಷಗಳ ಹಿಂದೆ ಈ ಬಂಡೆ ರಚನೆಯಾಗಿರಬಹುದೆಂದು ಅಂದಾಜಿಸಲಾಗಿದೆ.

ಪ್ರಾಚೀನ ಖಂಡಗಳಾದ ಲೂರೆನ್ಷಿಯಾ ಹಾಗೂ ಅವಲೋನಿಯಾ ಖಂಡಗಳು ಮುಖಾಮುಖಿ ಡಿಕ್ಕಿಯಾದ ಸಂದರ್ಭ ಸಾಗರದಲ್ಲಿ ಮುಚ್ಚಿಹೋಗಿದ್ದ ಬಂಡೆಗಳು ಸಮುದ್ರ ಹಾಗೂ ವಾತಾವರಣದಲ್ಲಿ ಘಟಿಸಿದ ಹಲವು ಬದಲಾವಣೆಗಳ ಕಾರಣ ಕಾಲಾಂತರದಲ್ಲಿ ಮೇಲ್ಮೈನಲ್ಲಿ ಗೋಚರಿಸಲು ಆರಂಭಿಸಿದವು. ಆ ಬಂಡೆಗಳಲ್ಲಿ ವಿಚಿತ್ರ, ವಿಶಿಷ್ಟ ರೂಪದಿಂದ ಆಕರ್ಷಿಸಿದ್ದು, ಪಿಟೀಲಿನಂಥ ಈ ಬಂಡೆ.

ವರ್ಷದ ಎಲ್ಲಾ ಸಮಯದಲ್ಲೂ ಭೇಟಿ ನೀಡಬಹುದಾದ ಈ ಸ್ಥಳ ಅತ್ಯುತ್ತಮವಾದ ಪ್ರವಾಸಿ ಸ್ಥಳ ಮಾತ್ರವಲ್ಲ, ಹಲವು ಹಕ್ಕಿಗಳಿಗೆ ಆಶ್ರಯತಾಣವೂ ಆಗಿದೆ. ಹೆರ್ರಿಂಗ್ ಗಲ್ಸ್, ಗ್ರೇಟ್ ಬ್ಲಾಕ್ ಬ್ಯಾಕ್ಡ್ ಗಲ್ಸ್‌ನಂಥ ಸಮುದ್ರ ಪಕ್ಷಿಗಳಿಗೆ ನೆಲೆಯೂ ಆಗಿದೆ. ಸ್ಕಾಟ್ಲೆಂಡ್‌ಗೆ ಭೇಟಿ ನೀಡುವವರು ತಪ್ಪದೇ ಈ ಕಲ್ಲುಬಂಡೆಯ ದರ್ಶನವನ್ನೂ ಮಾಡಿ, ಸಾಗರ ತೀರದಲ್ಲಿ ಸುತ್ತಾಡಿ ಬರುವುದು ರೂಢಿ.

ಪ್ರತಿಕ್ರಿಯಿಸಿ: feedback@sudha.co.in